ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಯೋಗಿಕ ಪತ್ರಿಕೆ

# ವಿಎಸ್‌ಕೆಯು weekly

ಸಂಪುಟ : 01 ಸಂಚಿಕೆ : 03 ದಿನಾಂಕ : ಸೆಪ್ಟೆಂಬರ್ 24 – 30, 2016.

## ವಿಎಸ್‌ಕೆ ವಿವಿಯ ಕುಲಪತಿ, ಕುಲಸಚಿವರಿಂದ ವಿನೂತನ ಹೆಜ್ಜೆ!

**ಬಳ್ಳಾರಿ, ಸೆ. 26:** ವಿಶ್ವವಿದ್ಯಾಲಯದ ಬಿಡುವಿಲ್ಲದ ಆಡಳಿತ ಕಾರ್ಯಗಳ ನಡುವೆಯೂ ಕುಲಪತಿಗಳು ಮತ್ತು ಕುಲಸಚಿವರು ಪಾಠ–ಪ್ರವಚನ ನೀಡಲು ನಿರ್ಧರಿಸುವ ಮೂಲಕ ಹೊಸ ಬೆಳವಣಿಗೆಗೆ ನಾಂದಿ ಹಾಡಿದ್ದಾರೆ.

ಹೌದು, ವಿದ್ಯಾರ್ಥಿಗಳಿಂದ ಸದಾ ದೂರವೇ ಉಳಿಯುತ್ತಿದ್ದ ಕುಲಪತಿ ಮತ್ತು ಕುಲಸಚಿವರ ಹುದ್ದಿಯಲ್ಲಿರುತ್ತಿದ್ದ ಪ್ರಾಧ್ಯಾಪಕರುಗಳಿಗೆ ಅಪವಾದವೆಂಬಂತೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಂ. ಎಸ್. ಸುಭಾಷ್ ಮತ್ತು ಕುಲಸಚಿವರಾದ ಪ್ರೊ. ಟಿ. ಎಂ. ಭಾಸ್ಕರ್ ಅವರು ಸೆಪ್ಟೆಂಬರ್ 21ರಿಂದ ತರಗತಿ ತೆಗೆದುಕೊಳ್ಳುವ ಮೂಲಕ ಇನ್ನಿತರ ಉಪನ್ಯಾಸಕರುಗಳಿಗೆ ಮಾದರಿಯೆನಿಸಿದ್ದಾರೆ.





ವಿವಿಯ ಎಂಬಿಎ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುತ್ತಿರುವ ಕುಲಪತಿಗಳಾದ ಪ್ರೊ. ಎಂ. ಎಸ್. ಸುಭಾಷ್ ಮತ್ತು ಕನ್ನಡ ವಿಭಾಗದ ವಿದ್ಯಾರ್ಥಿಗಳಿಗೆ ಪ್ರವಚನ ನೀಡುತ್ತಿರುವ ಕುಲಸಚಿವರಾದ ಪ್ರೊ. ಟಿ. ಎಂ. ಭಾಸ್ಕರ್.

ವಿಶ್ವವಿದ್ಯಾಲಯದ 7ನೇ ಸಂಸ್ಥಾಪನ ದಿನಾಚರಣೆಯ ಕಾರ್ಯಕ್ರಮದಲ್ಲಿ, ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿ ಅವರಿಗೆ ನೀಡಿದ ಮಾತಿನಂತೆ ಕುಲಪತಿಗಳಾದ ಪ್ರೊ. ಎಂ. ಎಸ್. ಸುಭಾಷ್ ಅವರು ತರಗತಿ ತೆಗೆದುಕೊಳ್ಳಲು ಆರಂಭಿಸಿದ್ದಾರೆ. ಎಂ.ಬಿ.ಎ. ವಿಭಾಗದ ವಿದ್ಯಾರ್ಥಿಗಳಿಗೆ ಆರ್ಥಿಕತೆಯ ಬಗ್ಗೆ ತರಗತಿ ತೆಗೆದುಕೊಂಡ ಕುಲಪತಿಗಳು, ಷೇರುಗಳ ಮಹತ್ವವೇನು? ಷೇರುಗಳು ಆರ್ಥಿಕಾಭಿವೃದ್ಧಿಯಲ್ಲಿ ಯಾವ ರೀತಿ ಪ್ರಭಾವ ಬೀರುತ್ತವೆ? ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕಾದ ಕೌಶಲ್ಯಗಳ ಬಗ್ಗೆ ಒಂದು ತಾಸಿಗೂ ಹೆಚ್ಚುಕಾಲ ಉಪನ್ಯಾಸ ನೀಡಿದರು.

ಕುಲಪತಿಗಳ ಹಾದಿಯನ್ನೇ ಅನುಸರಿಸಿದ ಪ್ರೊ. ಟಿ. ಎಂ. ಭಾಸ್ಕರ್ ಅವರು, ತಮ್ಮ ವಿಷಯವಾದ ಕನ್ನಡ ವಿಭಾಗಕ್ಕೆ ತೆರಳಿ ಕಾವ್ಯ ಮೀಮಾಂಸೆ, ಕಾವ್ಯ ಕಾರಣ, ಕಾವ್ಯ ಪ್ರಯೋಜನ ವಿಷಯಗಳ ಬಗ್ಗೆ ವಿವರವಾಗಿ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಅವರು ಪ್ರತಿ ಮಂಗಳವಾರ ತರಗತಿಗಳನ್ನು ತೆಗೆದುಕೊಳ್ಳುವುದಾಗಿ ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು.

ಕುಲಪತಿಗಳು ಷೇರು ಮಾರುಕಟ್ಟೆಯ ಆಗುಹೋಗುಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದು ಖುಷಿ ನೀಡಿತು ಹಾಗೂ ಈ ಸಂಬಂಧ ವಿದ್ಯಾರ್ಥಿಗಳು ತಮ್ಮಲ್ಲಿ ಕೌಶಲ್ಯಗಳನ್ನು ಬೆಳಸಿಕೊಳ್ಳಬೇಕೆಂಬ ಸ್ಫೂರ್ತಿಯುತ ಮಾತುಗಳಾನ್ನಾಡಿದರು ಎಂದು ಎಂಬಿಎ ವಿಭಾಗದ ವಿದ್ಯಾರ್ಥಿನಿ ಜ್ಯೋತಿ ವಿಎಸ್‌ಕೆಯು ವೀಕ್ಲೀಗೆ ತಿಳಿಸಿದರು. ಪಾಠ ಪ್ರವಚನಗಳ ಜೊತೆಗೆ ಕುಲಪತಿಗಳು ಹಾಗೂ ಕುಲಸಚಿವರು ವಿದ್ಯಾರ್ಥಿಗಳಿಗೆ ಸನಿಹವಾದದ್ದು, ಅವರಲ್ಲಿ ಸಂತಸ ಮೂಡಿಸಿತ್ತು.

**–ಪದ್ಮಾವತಿ**

## ಸಾಹಿತ್ಯ ಮತ್ತು ಪತ್ರಿಕೋದ್ಯಮ ಅವಿಚ್ಛಿನ್ನ – ಪೆಲೇಸ್

**ಬಳ್ಳಾರಿ, ಸೆ. 24:** ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳು ಒಂದು ನಾಣ್ಯದ ಎರಡು ಮುಖಗಳಿದಂತೆ. ಸಾಹಿತ್ಯ ಎನ್ನುವುದು ಬದುಕಿನ ಭಾವನಾತ್ಮಕ ಭಾಗವಾದರೆ, ಮಾಧ್ಯಮವು ದಿನನಿತ್ಯದ ಆಗು–ಹೋಗುಗಳ ಅರಿವು ನೀಡುವ ಸಾಮಾಜಿಕ ಅಗತ್ಯತೆಯ ಭಾಗ ಎಂದು ಮೆಕ್ಸಿಕೊ ನಿವಾಸಿ, ಕಾದಂಬರಿಕಾರ್ತಿ ಮತ್ತು ಪತ್ರಕರ್ತೆಯಾದ ಮಿಸ್ ಮಾರಿಯಾ ಪೆಲೇಸ್ ಅಭಿಪ್ರಾಯಪಟ್ಟರು.

ನಗರದ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿನ ಇಂಗ್ಲೀಷ್ ವಿಭಾಗವು ಸೆಪ್ಟೆಂಬರ್ 16ರಂದು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ **ಸಾಹಿತ್ಯ ಮತ್ತು ಮಾಧ್ಯಮ** ವಿಷಯದ ಕುರಿತು ಅವರು ಮಾತನಾಡಿದರು. ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳು ಬೇರೆ ಬೇರೆಯೆನಿಸಿದರೂ ಬದುಕಿನ ಅಗತ್ಯ ಪ್ರಕ್ರಿಯೆಗಳಾಗಿವೆ ಮತ್ತು ಪೂರಕವಾಗಿ ಬೆಳವಣಿಗೆ ಕಂಡಿವೆ ಎಂದು ತಿಳಿಸಿದರು.

ಪ್ರಸಕ್ತ ಕಾಲಘಟ್ಟದ ಕುರಿತು ಮಾತನಾಡುತ್ತ, ಅಮೆರಿಕ ಮಾಧ್ಯಮ ಹೇಳಿದ್ದನ್ನು ಎಲ್ಲರೂ ನಂಬುತ್ತಾರೆ. ಆದರೆ ಇಂದು ಬಹಳಷ್ಟು ಮಾಧ್ಯಮ ಭ್ರಷ್ಟಗೊಂಡಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಭಾರತದಲ್ಲಿ ಮಾಧ್ಯಮ ಕ್ಷೇತ್ರಕ್ಕೆ ಉತ್ತಮ ಭವಿಷ್ಯವಿದೆ. ಆದರೆ ಇಲ್ಲಿನ ಪತ್ರಕರ್ತರು ಸಾಮಾಜಿಕ ಕಾಳಜಿಯೊಂದಿಗೆ ದುಡಿದರೆ ಖಂಡಿತವಾಗಿ ಮಾಧ್ಯಮ ಸಕಾರಾತ್ಮಕವಾಗಿ ಬೆಳೆಯಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

**ಪೆಲೇಸ್ ಹಿನ್ನೆಲೆ:** ಮಾರಿಯಾ ಪೆಲೇಸ್‌ರವರು ಕ್ಯೂಬಾದಲ್ಲಿ ಜನಿಸಿದ್ದು, ಇಂಗ್ಲೆಂಡ್‌ನಲ್ಲಿ ತಮ್ಮ ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಪತ್ರಿಕೋದ್ಯಮ ವಿಷಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಗಳಿಸಿ ಅನಂತರ ಪತ್ರಕರ್ತೆಯಾಗಿ ವೃತ್ತಿಜೀವನ ಆರಂಭಿಸಿ, ಖ್ಯಾತನಾಮರಾಗಿ ಬೆಳೆದಿದ್ದಾರೆ.

**–ರಾಘವೇಂದ್ರ**

## ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಿ: ಕುಲಸಚಿವರು

**ಬಳ್ಳಾರಿ, ಸೆ. 26:** ಮಾನವನು ವಿಚಾರವಾದಿಯಾಗಿರುವುದರಿಂದ ಅವನಿಗೆ ಭೌತಿಕವಾಗಿ ಮತ್ತು ಮಾನಸಿಕವಾಗಿ ಪ್ರಪಂಚದ ಎಲ್ಲಾ ವಿಷಯಗಳ ಜ್ಞಾನ ಅವಶ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಿವಿಯ ಕುಲಸಚಿವರಾದ ಪ್ರೊ. ಟಿ.ಎಂ.ಭಾಸ್ಕರ್ ಕರೆ ಕೊಟ್ಟರು.

ನಗರದ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ಕಳೆದ ಗುರುವಾರ ಹಮ್ಮಿಕೊಂಡಿದ್ದ ರಸಪ್ರಶ್ನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಆಧುನಿಕ ಯುಗದಲ್ಲಿ ಮಾನವನ ಅಳಿವು–ಉಳಿವಿಗೆ ಸ್ಪರ್ಧೆ ಮುಖ್ಯವಾಗಿದೆ. ಆದ್ದರಿಂದ ಮನುಷ್ಯ ದೇಶ ಸುತ್ತಿಯಾದ್ರು, ಕೋಶ ಓದಿಯಾದ್ರು ಜ್ಞಾನವನ್ನು ಸಂಪಾದನೆ ಮಾಡಬೇಕು ಇಲ್ಲದ್ದರೇ ನಾವುಗಳು ನಿರುಪಯುಕ್ತ ಜೀವಿಗಳಾಗಿ ಬಿಡುತ್ತೇವೆ ಎಂದು ಅಭಿಪ್ರಾಯಿಸಿದರು.

ಪರೀಕ್ಷಾಂಗ ಕುಲಸಚಿವ ಪ್ರೊ. ಎಲ್. ಆರ್. ನಾಯ್ಕ್ ಮಾತನಾಡಿ, ವ್ಯಕ್ತಿತ್ವ ವಿಕಾಸದ ಜೊತೆಗೆ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಜ್ಞಾನ ಸಂಪಾದನೆ ಮುಖ್ಯವಾಗಿ ಬೇಕು ಎಂದರು. ವಿವಿಯಲ್ಲಿನ ಯುವ ರೆಡ್‌ಕ್ರಾಸ ಘಟಕದ ಸಮನ್ವಯಾಧಿಕಾರಿ ರಾಜೇಂದ್ರ ಪ್ರಸಾದ್ ಮಾತನಾಡಿ, ಮನುಷ್ಯ ತನ್ನ ಜೀವನದಲ್ಲಿ ಕ್ಷಣ–ಕ್ಷಣಕ್ಕೂ ಸ್ಪರ್ಧೆಯಿಂದ ಬದುಕು ಕಟ್ಟಿಕೊಳ್ಳುತ್ತಿದ್ದಾನೆ. ಈ ಬದುಕನ್ನು ಜ್ಞಾನ ಸಂಗ್ರಹದಿಂದ ಇನ್ನಷ್ಟು ಸುಂದರವಾಗಿಸಬಹುದು ಎಂದು ತಿಳಿಸಿದರು.

**ರಸಪ್ರಶ್ನೆ ಸ್ಪರ್ಧೆ:** ಸ್ಪರ್ಧೆಯಲ್ಲಿ ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳ ಸುಮಾರು 28 ತಂಡಗಳು ಭಾಗವಹಿಸಿದ್ದವು. ಇವುಗಳಲ್ಲಿ ಐದು ತಂಡಗಳು ಪೂರಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅಂತಿಮ ಹಂತವನ್ನು ತಲುಪಿದವು. ವಿಶ್ವವಿದ್ಯಾಲಯದ ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ಅಳವಂಡಿಯ ಸರ್ಕಾರಿ ಪದವಿ ಕಾಲೇಜಿನ ವಿದಾರ್ಥಿಗಳು ದ್ವಿತೀಯ ಸ್ಥಾನ ಹಾಗೂ ಮೋಕಾ ಸರ್ಕಾರಿ ಪದವಿ ಕಾಲೇಜಿನ ವಿದಾರ್ಥಿಗಳು ತೃತೀಯ ಸ್ಥಾನ ಪಡೆದರು.

ಸ್ಪರ್ಧೆಯಲ್ಲಿ ಗೆದ್ದದ್ದು ತುಂಬಾ ಖುಷಿಯಾಗಿದೆ. ರಸಪ್ರಶ್ನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಬಹುದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಅನುಕೂಲವಾಗುತ್ತದೆ ಎಂದು ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿ ಚಂದ್ರನಾಯ್ಕ ವಿಎಸ್‌ಕೆಯು ವೀಕ್ಲೀಗೆ ಅಭಿಪ್ರಾಯಿಸಿದರು.

**– ಗುರುಬಸವರಾಜ್ ಉಳ್ಳಾಗಡ್ಡಿ**

**ನಿಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳಿಗಾಗಿ**

**vskuweekly@gmail.com**

## ವಿವಿಯಿಂದ ಟಾರ್ಗೆಟ್–100 ಕಾರ್ಯಗಾರ

**ಬಳ್ಳಾರಿ, ಸೆ. 27:** ಹೈದರಾಬಾದ್–ಕರ್ನಾಟಕ ಭಾಗದ ಅಭಿವೃದ್ಧಿಗೆ ಹಿನ್ನೆಡೆಯನ್ನುಂಟು ಮಾಡುತ್ತಿರುವ ಶಿಕ್ಷಣದ ಕೊರತೆಯನ್ನು ನೀಗಿಸಲು ವಿವಿಯು ಟಾರ್ಗೆಟ್– 100 ಎಂಬ ಕಾರ್ಯಗಾರವನ್ನು ಅ. 1ರಂದು ಹಮ್ಮಿಕೊಂಡಿದೆ.

ವಿಶ್ವವಿದ್ಯಾಲಯವು ತನ್ನ ಮಾನ್ಯತೆಯಡಿ ಹೊಸ ಪದವಿ ಕಾಲೇಜುಗಳ ಆರಂಭಕ್ಕೆ ತೀರ್ಮಾನಿಸಿದ್ದು ಹಾಗೂ ಈ ಸಲುವಾಗಿ ಆಸಕ್ತ ನಾಗರಿಕರು ವಿವಿಗೆ ನೇರವಾಗಿ ಸಹಕಾರ ನೀಡಬಹುದಾದ ಅವಕಾಶ ನೀಡುತ್ತಿದೆ. ಈ ಭಾಗದ ಅಭಿವೃದ್ಧಿಯ ಕಳಕಳಿಯುಳ್ಳ ಉದ್ಯಮಪತಿಗಳು, ಶ್ರೀಮಂತರು, ಬ್ಯಾಂಕ್‌ಗಳು, ಸ್ವಯಂ ಸೇವಾ ಸಂಸ್ಥೆಗಳು, ಎನ್‌ಜಿಒಗಳು ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜುಗಳ ಆಡಳಿತಗಾರರು ಸೇರಿದಂತೆ ಎಲ್ಲಾ ವರ್ಗಗಳು ವಿದ್ಯಾದಾನದ ಕಾರ್ಯದಲ್ಲಿ ಪಾಲ್ಗೊಳ್ಳುವುದನ್ನು ವಿವಿ ಸ್ವಾಗತಿಸಿದೆ.

ಈ ವಿಷಯಗಳ ಕುರಿತು ಸಮರ್ಪಕ ಚರ್ಚೆ, ಮಾಹಿತಿ ಹಂಚಿಕೆಯೊಂದಿಗೆ ಆಸಕ್ತರ ಮುಖಾಮುಖಿಗಾಗಿ ವಿವಿಯು ಅ. 01 ರಂದು ಬೆಳಿಗ್ಗೆ 10.00 ಗಂಟೆಗೆ ವಿವಿಯ ಸಭಾಂಗಣದಲ್ಲಿ ಕಾರ್ಯಗಾರವನ್ನು ಆಯೋಜಿಸಿದೆ. ಸಮಾವೇಶಕ್ಕೆ ಉದ್ಯಮಪತಿಗಳು, ರಾಜಕೀಯ ಮುಖಂಡರು, ತಜ್ಞರು ಹಾಗೂ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಲಿದ್ದಾರೆ ಎಂದು ವಿವಿಯ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ಸುರೇಶ್‌ಬಾಬು ತಿಳಿಸಿದ್ದಾರೆ.

## ಉದ್ಯೋಗ ಮಾಹಿತಿ

| ಇಲಾಖೆ/ವೆಬ್‌ಸೈಟ್ | ಹುದ್ದೆಗಳ ಸಂಖ್ಯೆ |
|---|---|
| ಕೆಪಿಎಸ್‌ಸಿ | 156 |
| ಪಿಡಿಓ | 815 |
| ಗ್ರಾ.ಪಂ. ಕಾರ್ಯದರ್ಶಿ | 809 |
| ಪಿಎಸ್‌ಐ (ಸಿವಿಲ್) | 398 |
| ಆರ್‌ಎಸ್‌ಐ (ವೈರ್‌ಲೆಸ್) | 90 |
| ಸಿಪಿಸಿ (ಸಿವಿಲ್ ಕಾನ್ಸ್‌ಟೇಬಲ್) | 3477 |
| ಪೋಲಿಸ್ ಕಾನ್ಸ್‌ಟೇಬಲ್ | 1834 |
| ನವೋದಯ ಶಿಕ್ಷಕರು | 2072 |
| ಪ್ರಿನ್ಸಿಪಾಲ್(ಕೇಂದ್ರಿಯ ವಿದ್ಯಾಲಯ) | 90 |
| ಪಿಜಿಟಿ(ಕೇಂದ್ರಿಯ ವಿದ್ಯಾಲಯ) | 334 |
| ಟಿಜಿಟಿ(ಕೇಂದ್ರಿಯ ವಿದ್ಯಾಲಯ) | 486 |
| ಪ್ರಾಥಮಿಕ ಶಿಕ್ಷಕರು(ಕೇಂದ್ರಿಯ ವಿದ್ಯಾಲಯ) | 2281 |

**ವಿದ್ಯಾರ್ಥಿ ಸಂಪಾದಕರು:** ಪದ್ಮಾವತಿ, ಲತಾ ವಿ, ರಾಘವೇಂದ್ರ, ಗುರುಬಸವರಾಜ್ ಉಳ್ಳಾಗಡ್ಡಿ, ಪಿ. ಅಲ್ಲಾಭಕ್ಷಿ, ವಿಶ್ವರೂಪ್.

**ಮಾರ್ಗದರ್ಶಕರು :** ವಿನಯ್ ಜಿ. ಪಿ.